ನೋಡಿ ಸಂತೋಷದಿಂದ ತೆಗೆದುಕೊಂಡ.

ಮರುದಿನ ರಾಜ ಅವರಿಬ್ಬರನ್ನೂ ಕೇಳಿದ, 'ನಿನ್ನೆ ನೀವು ಆ ದಾರಿಯಲ್ಲಿ ಹೋಗುವಾಗ ಏನಾದರೂ ರಸ್ತೆಯ ಮೇಲೆ ಬಿದ್ದದ್ದು ನೋಡಿದಿರಾ?' ಯುವ ಭಿಕ್ಷುಕ ಅಡ್ಡಡ್ಡವಾಗಿ ತಲೆಯಾಡಿಸಿ, 'ಆ ರಸ್ತೆ ತುಂಬಾ ಸ್ವಚ್ಛವಾಗಿ ಮತ್ತು ಪ್ರಶಾಂತವಾಗಿತ್ತು. ತಂಪಾದ ಗಾಳಿಯೂ ಬೀಸುತ್ತಿತ್ತು... ನಾನು ಆ ಸುಂದರ ವಾತಾವರಣದಲ್ಲಿ ಕಣ್ಮುಚ್ಚಿ ನಡೆಯುತ್ತಾ, ಆ ತಂಗಾಳಿಯ ಸುಖವನ್ನು ಅನುಭವಿಸಿದೆ. ಆದ್ದರಿಂದ ನನಗೇನೂ ಅಲ್ಲಿ ಕಾಣಿಸಲಿಲ್ಲ' ಎಂದನು.

ತಕ್ಷಣವೇ ಇನ್ನೊಬ್ಬ ಭಿಕ್ಷುಕ ಹೇಳಿದ, 'ನನಗೆ ಆ ರಸ್ತೆಯಲ್ಲಿ ಒಂದು ಚೀಲ ಸಿಕ್ಕಿತು, ಅದರಲ್ಲಿ ಚಿನ್ನದ ನಾಣ್ಯಗಳಿದ್ದವು. ನಾವೇನನ್ನು ಪಡೆಯುತ್ತೇವೆಯೋ, ಅದೆಲ್ಲ ಭಗವಂತನ ಕೊಡುಗೆ' ಎಂದು ಕೈ ಮುಗಿದನು.

ಭಿಕ್ಷುಕನ ಈ ಹೇಳಿಕೆ ಕೇಳಿದ ರಾಜನಿಗೆ ಸಮಾಧಾನ ದೊರೆಯಲಿಲ್ಲ. 'ಆ ಭಿಕ್ಷುಕನಿಗೆ ಈ ಎಲ್ಲ ಕೊಡುಗೆಗಳೂ ದೇವರದ್ದಲ್ಲ. ನನ್ನದು, ನಿಜವಾದ ಪರೋಪಕಾರಿ ನಾನು. ಎಂದು ಸಾಬೀತು ಪಡಿಸಿಯೇ ತೀರಬೇಕು' ಎಂದು ಹೇಳಿ ಅವರನ್ನು ಸಾಗಹಾಕಿದ. 'ಆ ಭಿಕ್ಷುಕನಿಗೆ ಹೇಗೆ ಮನದಟ್ಟು ಮಾಡಬೇಕು?' ಎಂಬ ಭಾವ ಬಂದು, ನೆಮ್ಮದಿ ಇಲ್ಲದವನಂತಾದ.

ಮರುದಿನ ಆ ಇಬ್ಬರೂ ಎಂದಿನಂತೆ ಅವರವರ ಭಿಕ್ಷೆಯನ್ನು ಪಡೆದು ಹೊರ ಹೋಗುತ್ತಿದ್ದಾಗ ರಾಜ ಯುವ ಭಿಕ್ಷುಕನನ್ನು ವಾಪಸ್ ತನ್ನ ಬಳಿ ಕರೆದು ಅವನ ಕೈಗೊಂದು ಕುಂಬಳಕಾಯಿಯನ್ನು ಕೊಟ್ಟು ಕಳಿಸಿದನು.

ಈ ಮೊದಲೇ ರಾಜನ ಆಜ್ಞೆಯಂತೆ ಸೇವಕರು ಆ ಕುಂಬಳಕಾಯಿಯನ್ನು ರಂಧ್ರ ಮಾಡಿ ತಿರುಳನ್ನು ತೆಗೆದು ಅದರೊಳಗೆ ಬೆಳ್ಳಿಯ ನಾಣ್ಯಗಳನ್ನು ತುಂಬಿಸಿದ್ದರು. ಆದರೆ, ಆ ಯುವ ಭಿಕ್ಷುಕನಿಗೆ ಅದರಲ್ಲಿನ ರಹಸ್ಯ ತಿಳಿದಿರಲಿಲ್ಲ ಹಾಗಾಗಿ, ಇದರಿಂದ ನನಗೇನೂ ಪ್ರಯೋಜನವಿಲ್ಲ. ಮಾರಿದರೆ ನಾಲ್ಕು ಕಾಸು ಸಿಗಬಹುದು ಎಂದು ಯೋಚಿಸಿ, ದಾರಿ ಮಧ್ಯದಲ್ಲೇ ಒಬ್ಬ ವ್ಯಾಪಾರಿಗೆ ಮಾರಿಬಿಟ್ಟ. ಮರುದಿನ ಇಬ್ಬರು ಭಿಕ್ಷುಕರು ಆಸ್ಥಾನಕ್ಕೆ ಬಂದಾಗ, ರಾಜನು 'ನಿನ್ನೆ ಏನಾದರೂ ಘಟನೆ ನಡೆಯಿತೆ?' ಎಂದು ಕೇಳಿದ.

ಯುವ ಭಿಕ್ಷುಕ ಹೇಳಿದ, 'ಅಂಥ ವಿಶೇಷವೇನೂ ಕಾಣಲಿಲ್ಲ ಮಹಾಪ್ರಭು. ಆದರೆ ನಿನ್ನೆ ನೀವು ಕೊಟ್ಟ ಕುಂಬಳಕಾಯಿಯನ್ನು ಮಾರಿ ಹಿಂದಿನ ದಿನಕ್ಕಿಂತ ಸ್ವಲ್ಪ ಜಾಸ್ತಿ ಹಣ ಸಂಪಾದಿಸಿದೆ ಅಷ್ಟೆ' ಎಂದ.

ಇದನ್ನು ಕೇಳಿದ ರಾಜನಿಗೆ ಆಶಾಭಂಗವಾಯ್ತು. ನೀರಸ ಧ್ವನಿಯಲ್ಲಿ ಹಿರಿಯ ಭಿಕ್ಷುಕನಿಗೆ ಅದೇ ಪ್ರಶ್ನೆಯನ್ನು ಕೇಳಿದ.

ಅದಕ್ಕೆ ಆತ ಹೇಳಿದ, 'ಹೌದು ಮಹಾಸ್ವಾಮಿ, ನಿನ್ನೆ ಒಂದು ಅನಿರೀಕ್ಷಿತ ಘಟನೆ ನಡೆಯಿತು. ನಾನು ಭಿಕ್ಷೆಯನ್ನು ಪಡೆದು ಮನೆಗೆ ಹಿಂದಿರುಗುತ್ತಿದ್ದಾಗ ಒಬ್ಬ ವ್ಯಾಪಾರಿಯು ನನ್ನನ್ನು ಕರೆದು ಒಂದು ಕುಂಬಳಕಾಯನ್ನು ಕೊಟ್ಟನು. ನಾನು ಮನೆಗೆ ಹೋಗಿ ಅದನ್ನು ಒಡೆದಾಗ ಅದರಲ್ಲಿ ಬೆಳ್ಳಿಯ ನಾಣ್ಯಗಳು ಕಂಡವು. ನಾನು ಯಾವಾಗಲೂ ಹೇಳುವಂತೆ ಜೀವನದಲ್ಲಿ ನಾವೇನೇ ಪಡೆದರೂ ಅದು ಭಗವಂತನ ಭಿಕ್ಷೆ' ಎಂದನು.

ರಾಜ ನಿರುತ್ತರನಾದನು. ■



# ಮುಂದೇನು?

■ ಸವಿತಾ ನಾಗಭೂಷಣ
ಕಲೆ: ಸಂತೋಷ್ ಸಸಿಹಿತ್ಲು

ಮಗು, ನೀನು ಮುಂದೇನಾಗಬೇಕು?
ತಾಯಿ ಉತ್ತರಿಸಿದಳು
ಅವನು ಡಾಕ್ಟರ್ ಆಗುವನು
ಮಗು ಪಿಳಿಪಿಳಿ ಕಣ್ಣು ಬಿಟ್ಟಿತು

ಮಗು, ನೀನು ಮುಂದೇನಾಗಬೇಕು?
ತಂದೆ ಉತ್ತರಿಸಿದನು
ಅವಳು ಎಂಜಿನಿಯರ್ ಆಗುವಳು
ಮಗು ಪಿಳಿಪಿಳಿ ಕಣ್ಣು ಬಿಟ್ಟಿತು

ಡಾಕ್ಟರ್ ಆದ ಮೇಲೆ?
ತಂದೆ ಹೇಳಿದನು
ವಿದೇಶಕ್ಕೆ ಹೋಗುವನು...
ತಾಯಿ ಹೇಳಿದಳು: ಹಣ
ಸಂಪಾದಿಸಿ ಮರಳಿ ಬರುವನು

ಮಗುವನ್ನೇ ಕೇಳಿದೆ ಹೋಗುವಿಯೇನು?
ಮಗು ದೃಢವಾಗಿ ಹೇಳಿತು:

ಅಜ್ಜಿಯ ಮನೆಗೆ ಹೋಗುವೆನು
ಸೀಬೆಯ ಮರವ ಏರುವೆನು
ಹೊಂಡದ ನೀರಲಿ ಈಜುವೆನು
ನಾಯಿಯ ಜೊತೆ ಆಡುವೆನು
ಮಗ್ಗಿಯ ಪಟ ಪಟ ಹೇಳುವೆನು! ■

## ಕುಂಚ ಪ್ರಪಂಚ





ಮನಸ್ವಿ ಆರ್.ಕೆ.
8ನೇ ತರಗತಿ, ವಿಠ್ಠಲ್ ಜೇಸೀಸ್ ಆಂಗ್ಲ ಮಾಧ್ಯಮ ಶಾಲೆ, ವಿಟ್ಲ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
ವಿಳಾಸ: editorsu@sudha.co.in